ಆ) ರೈತರ ಪಂಪ್ ಸೆಟ್‌ಗಳ ಬಿಲ್ ಮಾರ್ಚ್ 2003ರ ಹಿಂದಿನದು ಮನ್ನಾ ಆಗಿರುವುದು ನಿಜವೇ; ಆದರೆ ಅದಕ್ಕೆ ಮೊದಲ ಅವಧಿಯ ಬಿಲ್ ಮೊತ್ತ ತುಂಬಿದ ಬಡ ರೈತರಿಗೆ ಮನ್ನಾ ಮಾಡಿರುವ ಕ್ರಮದಿಂದ ಲಾಭ ಸಿಗದಿರುವುದರ ಬಗ್ಗೆ ಸರ್ಕಾರದ ನಿಲುವೇನು :

ಇ) ಬರಗಾಲದ ತೊಂದರೆಯಲ್ಲಿರುವ ಎಲ್ಲಾ ರೈತರಿಗೂ ಅಂದರೆ ಈ ಮೊದಲೇ ಪಾವತಿ ಮಾಡಿರುವವರಿಗೂ ಸಹ ಬಿಲ್ ಮೊತ್ತವನ್ನು ಮನ್ನಾ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಕೇಂದ್ರವನ್ನು 110/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನಾಗಿ ಉನ್ನತೀಕರಿಸಲು ಆಡಳಿತಾತ್ಮಕ ಮಂಜೂರಾತಿ ಆಗಬೇಕಾಗಿರುತ್ತದೆ. ಈ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ. ವಿದ್ಯುತ್ ವಿತರಣಾ ಕೇಂದ್ರಕ್ಕಾಗಿ ಸೂಕ್ತ ಜಮೀನನ್ನು ಗುರುತಿಸಲಾಗಿದ್ದು. ಅದರ ಭೂ ಮಾಲೀಕರು ನಿವೇಶನವನ್ನು ನೀಡಲು ಒಪ್ಪಿಕೊಂಡಿರುತ್ತಾರೆ. ಭೂ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಈ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ. ಹಾಗೂ ಈ ನಿಟ್ಟಿನಲ್ಲಿ ಅಗತ್ಯವಾದ ಕ್ರಮಗಳನ್ನು ಶೀಘ್ರ ರೀತಿಯಲ್ಲಿ ತೆಗೆದುಕೊಳ್ಳಲಾಗುತ್ತಿದೆ.

ಆ) ಸರ್ಕಾರವು ದಿನಾಂಕ : 21.2.2004ರ ಆದೇಶದಲ್ಲಿ ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ದಿನಾಂಕ : 31.3.2003ರ ಅಂತ್ಯದವರೆಗಿನ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿರುತ್ತದೆ. ಸರ್ಕಾರದ ಈ ಆದೇಶದ ಪ್ರಕಾರ 31.3.2003ರ ಅಂತ್ಯದವರೆಗಿನ ಬಾಕಿಯನ್ನು ಒಂದು ವೇಳೆ 1.4.2003 ಮತ್ತು ತದನಂತರದಲ್ಲಿ ಪಾವತಿ ಮಾಡಿದ್ದಲ್ಲಿ, ಅಂತಹ ನೀರಾವರಿ ಪಂಪುಸೆಟ್ಟು ಗ್ರಾಹಕರಿಗೆ ಮಾತ್ರ ಪಾವತಿಸಲಾದ ಹಣವನ್ನು 2003–04ರ ವಿದ್ಯುತ್ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಡಲಾಗುತ್ತದೆ.

ಇ) ಸದ್ಯದಲ್ಲಿ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

774(1328) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ(ಕಿತ್ತೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಗಣಕೀಕೃತ ಪಹಣಿ ಸಿಗುವಂತೆ ಅನುಕೂಲ ಕಲ್ಪಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ರೈತರ ಅಪಸಾತಿ ವಾಟ್ಸಿ (ಮ್ಯೂಚುವಲ್ ಪಾರ್ಟಿಶನ್) ಮಾಡಿಕೊಂಡಾಗ್ಗೆ ಆ ಬಗ್ಗೆ ನೊಂದಣಿ ಮಾಡುವುದು ಅವಶ್ಯವಿಲ್ಲವೆಂದು ಕಂದಾಯ ಇಲಾಖೆಯವರು ಸುತ್ತೋಲೆ ಹೊರಡಿಸಿದೆಯೇ :

ಇ) ಹಾಗಿದ್ದಲ್ಲಿ, ಸುತ್ತೋಲೆ ಪ್ರಕಾರ ಅಪಸಾತಿ ವಾಟ್ಸಿ ಬಗ್ಗೆ ಕಂದಾಯ ಇಲಾಖೆಯವರು ಡೈರಿ ಮಂಜೂರು ಮಾಡಿ ಪಹಣಿ ಪತ್ರಿಕೆಯಲ್ಲಿ ದಾಖಲಿಸುವುದು ನಿಜವಲ್ಲವೇ ?

ಈ) ಹಾಗಿದ್ದಲ್ಲಿ, ಇಂತಹ ದಾಖಲಾತಿಗಳನ್ನು ಬ್ಯಾಂಕಿನವರು ಮಾನ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಸದರೀ ಅಪಸಾತಿ ವಾಟ್ಸಿ ನೊಂದಾಯಿಸುವುದು ಕಡ್ಡಾಯವೆಂದು ಹೇಳುತ್ತಿರುವುದರ ಬಗ್ಗೆ ಸರ್ಕಾರದ ನಿಲುವೇನು ?

ಉ) ಈ ಕುರಿತು ಬ್ಯಾಂಕ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ಸರ್ಕಾರ ನೀಡುವ ಬಗ್ಗೆ ಯೋಚಿಸುವುದೇ ?

ಶ್ರೀ ಎಂ.ಪಿ ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು, ಈ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ. ಇನ್ನು 2–3 ತಿಂಗಳುಗಳಲ್ಲಿ ತಾಲ್ಲೂಕುಗಳು ರಾಜ್ಯ ಮಟ್ಟದಲ್ಲಿ ಜೋಡಣೆಯಾದ ನಂತರ ರೈತರಿಗೆ ಗ್ರಾಮ ಮಟ್ಟದಲ್ಲಿಯೇ ಭೂ ದಾಖಲೆಗಳನ್ನು ಒದಗಿಸಲಾಗುವುದು.

ಆ) ರೈತರ ಅಪಸಾತಿ ವಾಟ್ನಿ (ಮ್ಯೂಚುವಲ್ ಪಾರ್ಟಿಶನ್)ಬಗ್ಗೆ ನೊಂದಣಿ ಮಾಡುವುದು ಅವಶ್ಯವಿಲ್ಲವೆಂದು ದಿ : 15–03–1997 ರಂದು ಕಂದಾಯ ಇಲಾಖೆಯವರು ಸುತ್ತೋಲೆ ಹೊರಡಿಸಿದೆ.

ಇ) ದಾಖಲಿಸಲಾಗುತ್ತಿದೆ.

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಉ) ಈ ಬಗ್ಗೆ ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ ಸರ್ಕಾರದಿಂದ ಬ್ಯಾಂಕ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶವನ್ನು ನೀಡಲಾಗುವುದು.

775(1329) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ(ಕಿತ್ತೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರೆವಿನ್ಯೂ ಸ್ಟ್ಯಾಂಪುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಇದರ ಪೂರೈಕೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಸರ್ಕಾರ ಈಗ ರೆವಿನ್ಯೂ ಸ್ಟ್ಯಾಂಪ್‌ಗಳ ಬಳಕೆ ಅಗತ್ಯವಿಲ್ಲವೆಂದು ಘೋಷಿಸಿದೆಯೇ ?

ಇ) ಇಲ್ಲದಿದ್ದಲ್ಲಿ ಸದರಿ ಸ್ಟ್ಯಾಂಪುಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು ನಿಜವೇ?

ಈ) ಹಾಗಿದ್ದಲ್ಲಿ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ ?

ಉ) ಇದರ ಜೊತೆಯಲ್ಲಿ ಬಾಂಡ್ ಪೇಪರುಗಳ (ಛಾಪಾ ಕಾಗದಗಳು) ಪೂರೈಕೆಯನ್ನು ಕೇವಲ ಎರಡು ಬ್ಯಾಂಕುಗಳಿಗೆ ಮಾತ್ರ ವಹಿಸಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಎರೆಡು ಬ್ಯಾಂಕುಗಳಿಗೆ ಮಾತ್ರ ವಹಿಸಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಪರ್ಯಾಯ ಕ್ರಮಗಳನ್ನು ಕೈಗೊಳ್ಳುವುದು .

ಊ) ಸದರಿ ಬಾಂಡುಗಳು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಿಗುವಂತೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು ವಿವರಿಸಿ ?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಅ) ಹೌದು.

ಸರ್ಕಾರವು ದಿನಾಂಕ : 01–04–2003 ರಿಂದ ಜಾರಿಗೆ ಬರುವಂತೆ ಸ್ಟ್ಯಾಂಪ್ ಬಳಕೆಯನ್ನು ಸ್ಥಗಿತಗೊಳಿಸಿದೆ.

ಭಾರತ ಮುದ್ರಾಂಕ ಕಾಯಿದೆ 1899 ರಡಿ ರೆವಿನ್ಯೂ ಸ್ಟ್ಯಾಂಪ್ ಬಳಸುವುದರಿಂದ ಕರ್ನಾಟಕ ರಾಜ್ಯಕ್ಕೆ ಸೀಮಿತವಾದಂತೆ, ವಿನಾಯಿತಿ ನೀಡಲು ಹಾಗೂ ಅಧಿಸೂಚನೆ ಹೊರಡಿಸಲು ಭಾರತ ಸರ್ಕಾರಕ್ಕೆ ದಿನಾಂಕ : 30–12–2003ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ.